ತಿಂಗಳ ಹಿಂದೆ. ಚಾಲೂ ಸ್ಥಿತಿಯಲ್ಲಿದ್ದ ಸ್ಕೂಟರಿನ ಎಕ್ಸಲೇಟರ್ ಹಿಡಿದು ಭುರ್... ಭುರ್... ಎಂದು ಮಜಾ ತೆಗೆಯುತ್ತಾ ಜೋರಾಗಿ ತಿರುಗಿಸಿ ಬಿಟ್ಟ. ಸ್ಪಷ್ಟ ಹಿಡಿತವಿಲ್ಲದ ಸ್ಕೂಟರ್ ನನ್ನ ಅಂಕೆಗೂ ಸಿಗದೆ ಸೂಯ್ಯೆಂದು ಹಾರಿ ಹೋಗಿ ಚರಂಡಿಯಲ್ಲಿ ಮಗುಚಿ ಬಿದ್ದಿತು. ಕೆಲವೇ ಸೆಕೆಂಡುಗಳಲ್ಲಿ ನನ್ನ ಕೈ ಕಾಲು ಮುಸುಡಿ ಉಜ್ಜಿ ಹೋಗಿದ್ದವು. ಡಿಸೆಂಬರ್ ಚಳಿಯಲ್ಲಿ ಇಂತಹ ಅಚಾತುರ್ಯದ ಗಾಯಗಳಾದರೆ ಎಷ್ಟು ನರಳಾಟವಾಗುತ್ತದೆ ಎಂದು ಅಪಘಾತ ಅನುಭವಿಸಿದ ಎಲ್ಲರೂ ಬಲ್ಲರು.

ಈ ರೀತಿಯ ಎಡವಟ್ಟುಗಳಾದರೆ ಅದೇನೋ ಗೊತ್ತಿಲ್ಲ, ಮಕ್ಕಳಿಗೆ ಬೀಳುವ ಹೊಡೆತಗಳು ತುಂಬಾ ಕಮ್ಮಿ. ಅವು ಆಶ್ಚರ್ಯಕರ ರೀತಿಯಲ್ಲಿ ಹೆಂಗೆಂಗೋ ಪಾರಾಗಿ ಬಿಡುತ್ತವೆ. ಒಂದು ವೇಳೆ ತಾಕಿದರೂ ನಮ್ಮಷ್ಟು ಏಟುಗಳು ಬಿದ್ದಿರುವುದಿಲ್ಲ. ಅಂಕುಡೊಂಕಾದ ಅಂಡೆಕುಂಡೆಗಳ ಬೆಳೆಸಿಕೊಂಡು, ಗರ್ಭಗಾತ್ರದ ಹೊಟ್ಟೆ ಸಾಕಿಕೊಂಡ ನನ್ನಂತಹವರ ಧಡೂತಿ ದೇಹಕ್ಕೆ ತಾನೇ ಹೆಚ್ಚು ತೊಂದರೆ. ಮೂಟೆಯನ್ನು ಎತ್ತಿ ಎಸೆದಂತಾದಾಗ ಬೀಳುವ ಭೀಕರ ಪೆಟ್ಟುಗಳು ಹಿತಮಿತವಾಗಿರಲು ಸಾಧ್ಯವೇ? ಅದರಲ್ಲೂ ಅಸಡಾಬಸಡಾ ಟಾರು ರಸ್ತೆಯಲ್ಲಿ ಜಾರಿಕೊಂಡು ಹೋದಾಗ ಆಯಕಟ್ಟಿನ ಜಾಗೆಗಳೆಲ್ಲಾ ಉಜ್ಜಿಹೋಗಿರುತ್ತವೆ. ಮೊಣಕೈ ಜತೆಗೆ ಕಾಲಿನ ಮಂಡಿಯೂ ಕಿತ್ತು ಹೋಗಿ ಸಿಕ್ಕ ಪೆಟ್ಟುಗಳು ರಣಭೀಕರ ನೋವು ಕೊಡುತ್ತವೆ. ಇತ್ತ ಬೇಗ ವಾಸಿಯೂ ಆಗದೆ ದಿನ ದಿನವೂ ಸತಾಯಿಸುತ್ತವೆ. ಇವೆಲ್ಲರ ಪೂರ್ವಾನುಭವ ಆಗಿರುವ ನಾನು ಈಗೀಗ ಬಲು ಎಚ್ಚರಿಕೆ ವಹಿಸುವ ನಿಪುಣನಾಗಿದ್ದೇನೆ.

ಆ ದಿನ ಕಟ್ಟಿಂಗ್ ಶಾಪಿಗೆ ಹೋದಾಗ ಸದ್ಯ ಜನರಿರಲಿಲ್ಲ. ನನ್ನನ್ನು ಕಂಡ ನಾಪಿತ ಸತೀಶ ಸಿಂಹಾಸನ ಸ್ವರೂಪದ ಚೇರು ಹತ್ತಿಸಿ, ಕುತ್ತಿಗೆ ಸುತ್ತ ಬಟ್ಟೆ ಕಟ್ಟಿದ. ತನ್ನ ಹತ್ಯಾರಗಳ ತೆಗೆದು ನನ್ನ ತಲೆಯ ದುರಸ್ತಿಗೆ ನಿಂತ. ಕಬೀರನಿಗೆ ಇಲ್ಲಿನ ಪರಿಸರ ಹೊಸದೇನಲ್ಲ. ಅವನು ಸಲೀಸಾಗಿ ಇಲ್ಲಿ ಆಟ ಆಡಿಕೊಂಡಿರುತ್ತಾನೆ ಎಂಬುದು ನನ್ನ ಎಂದಿನ ನಂಬುಗೆ. “ಲೋ, ಹೊರಗೆ ರೋಡಿಗೆ ಹೋಗಬೇಡ, ಇಲ್ಲೇ ಇರು” ಎಂದು ಎಚ್ಚರಿಕೆ ಕೊಟ್ಟೆ. ಮಗನೂ ಒಪ್ಪಿದವನಂತೆ ಒಂದಿಷ್ಟು ಹೊತ್ತು ಕೂತ. ಹೀಗೆ ಮಕ್ಕಳು ಕೂರುವುದು ಸುಳ್ಳಿನ ಮಾತು.

ಅನಂತರ ಎದ್ದು ಬಂದು ಅದೇನು, ಇದೇನು, ಇದು ಯಾಕೆ? ಎಂದು ಸತೀಶನಿಗೆ ಹಲವಾರು ಪ್ರಶ್ನೆಗಳನ್ನು ಕೇಳಿದ. ತೃಪ್ತಿಕರ ಉತ್ತರ ಸಿಗದಿದ್ದಾಗ ಅವನ ಕಣ್ಣಿಗೆ ಕಂಡ ಕತ್ತರಿ, ಬಾಚಣಿಕೆ ಘಟ್ಟಕ್ಕನೆ ಎತ್ತಿಕೊಂಡು, “ಅಪ್ಪನಿಗೆ ನಾನೇ ಮಾಡ್ತೀನಿ” ಎಂದು ಹತ್ತಿರ ಬಂದ. “ಲೇ, ಕತ್ತರಿ ಮೊದಲಿಡೋ ಮಾರಾಯ. ಅದೆಲ್ಲಾ ನೀನು ಮಾಡೋ ಕೆಲಸವಲ್ಲ” ಎಂದು ಸತೀಶ ಕಿತ್ತುಕೊಂಡ. ಇಷ್ಟಕ್ಕೆ ಮುಖವೂದಿಸಿಕೊಂಡ ಸುಪುತ್ರ ಹೊರಗಿನ ಹೊಂಗೆ ಮರದಡಿ ಹೋಗಿ ನಿಂತ. ಆಗ ನಾನು ಸಲೂನಿನ ಹುಡುಗರಿಗೆ, “ಅವನ್ನ ಒಂಚೂರು ಹಂಗೆ ನೋಡಿಕೊಳ್ರಾ ಇರಿ. ತರ್ಲೆ ನನ್ಮಗ ಅವನು. ಬ್ಯಾಡಾಂದ್ರೂ ಬೇತಾಳದಂಗೆ ಬಂದಿದ್ದಾನೆ” ಎಂದು ದೂರಿಕೊಂಡೆ. ಅದಕ್ಕೆ ಸತೀಶನ ಅಳಿಯ ಶ್ರೀಧರ, “ಎಷ್ಟಾದ್ರೂ ನಿಮ್ಮ ಮಗ ಅಲ್ವಾ ಸಾ” ಎಂದು ರಾಗ ಎಳೆದ. ನಾನು ಪೂರಾ ಕ್ರಾಕು, ನನ್ನ ಕುಡಿ ಹಾಫ್ ಕ್ರಾಕು ಎನ್ನುವಂತಿತ್ತು ಅವನ ಧಾಟಿ. “ನೀನೇನೋ ಹೊಗಳ್ತಾ ಇದ್ದೀಯೋ, ಕಿಚಾಯಿಸ್ತಾ ಇದೆಯೋ? ತಿಳಿತಾ ಇಲ್ವಲ್ಲೋ” ಎಂದು ನಾನು ಛೇಡಿಸಿದ್ದಕ್ಕೆ ಅವನೂ ದೇಶಾವರಿಯಾಗಿ ನಕ್ಕ. ಬಿಳಿಗೂದಲ ಅಜ್ಜನ ತಲೆಗೆ ಕರಿಬಣ್ಣ ಬಳಿದು, ಅದು ಒಣಗಲೆಂದು ಕಾಯುತ್ತಿದ್ದ ಅವನು ತನ್ನ ಕೆಲಸದ ನಡುವೆ ಸಿಕ್ಕ ಸಣ್ಣ ವಿಶ್ರಾಂತಿ ಸುಖ ಅನುಭವಿಸುತ್ತಾ ಒಂಟಿ ಕಾಲಲ್ಲಿ ನಿಂತಿದ್ದ.

ಅಷ್ಟರಲ್ಲಿ ಯಾರೋ ಕಬೀರನ ಜೊತೆ ಹೊರಗೆ ಮಾತಾಡುತ್ತಿದ್ದರು. ನಾನು ಕತ್ತು ತಿರುಗಿಸಿ ಯಾರೆಂದು ನೋಡಲು ಸಾಧ್ಯವೇ ಆಗದಂತೆ ಸತೀಶ ನನ್ನ ತಲೆಯನ್ನು ಬಿಗಿ ಹಿಡಿದು ಕೆತ್ತುತ್ತಿದ್ದ. ನಾನು ಸಂಭಾಷಣೆ ಮಾತ್ರ ಕೇಳಬಲ್ಲವನಾಗಿದ್ದೆ. ಮಗು ಮುದ್ದಾಗಿದೆ ಎಂದು ಯಾರೋ ಮಾತಾಡಿಸುತ್ತಿದ್ದಾರೆ ಎಂದು ನಾನು ಸುಮ್ಮನಾದೆ. ಮಕ್ಕಳು ಹೀಗೆ ಎಲ್ಲರ ಜೊತೆ ಸಹಜ ಮಾತಾಡಿ